**ವಿದೇಶಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುವುದಕ್ಕಾಗಿ ವಿದೇಶೀ ವಿನಿಮಯ ಬಿಡುಗಡೆಯ ಕಾರ್ಯವಿಧಾನವನ್ನು ಉದಾರೀಕರಣಗೊಳಿಸಲಾಗಿದೆ**

**ಸೆಪ್ಟೆಂಬರ್ 6, 2002**

ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ವಿದೇಶೀ ವಿನಿಮಯವನ್ನು ಯಾವುದೇ ಅಡೆತಡೆಗಳಿಲ್ಲದೆ ಮತ್ತು ವಿಳಂಬವಾಗದಂತೆ ನಿವಾಸಿಗಳು ಪಡೆದುಕೊಳ್ಳುವುದು ಸಾಧ್ಯವಾಗುವಂತೆ ಮಾಡಲು, ಅಧಿಕೃತ ವ್ಯಾಪಾರಿಗಳು ಭಾರತದಿಂದ ಹೊರಗೆ ವೈದ್ಯಕೀಯ ಚಿಕಿತ್ಸೆಗಾಗಿ 50,000 ಅಮೆರಿಕನ್ ಡಾಲರುಗಳವರೆಗೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದೆಂದು ನಿರ್ಧರಿಸಿದೆ. ಇದನ್ನು ವೈದ್ಯರಿಂದ ಅಥವಾ ಆಸ್ಪತ್ರೆಯಿಂದ ಯಾವುದೇ ಅಂದಾಜನ್ನು ಒತ್ತಾಯಿಸದೆ, ಅರ್ಜಿದಾರನು ಸಲ್ಲಿಸಿರುವ ಕೋರಿಕೆಯಲ್ಲಿನ ಘೋಷಣೆಯ ಆಧಾರದ ಮೇಲೆಯೇ ಮಾಡಲಾಗುತ್ತದೆ ಮತ್ತು ವಿದೇಶೀ ವಿನಿಮಯ ಖರೀದಿಗೆ ಸಂದಾಯವನ್ನು ಚೆಕ್ ಮೂಲಕ ಅಥವಾ ಅರ್ಜಿದಾರನ ಖಾತೆಗೆ ಖರ್ಚು ಹಾಕುವ ಮೂಲಕ ಸಂದಾಯ ಮಾಡಲಾಗುತ್ತದೆ.

ಸದ್ಯದಲ್ಲಿ ಜಾರಿಯಲ್ಲಿರುವ ವಿನಿಯಮಗಳ ಪ್ರಕಾರ, ನಿವಾಸಿಗಳು ಭಾರತದ ಹೊರಗೆ ಪಡೆಯುವ ವೈದ್ಯಕೀಯ ಚಿಕಿತ್ಸೆಗೆ ಅಗತ್ಯವಿರುವ ವಿದೇಶೀ ವಿನಿಮಯವನ್ನು, ಚಿಕಿತ್ಸೆಗೆ ತಗಲುವ ಸಂಭಾವ್ಯ ವೆಚ್ಚಗಳ ಅಂದಾಜನ್ನು ಒಬ್ಬರು ವೈದ್ಯರಿಂದ ಅಥವಾ ಆಸ್ಪತ್ರೆಯಿಂದ ಪಡೆದು ಅದನ್ನು ಹಾಜರುಪಡಿಸಿ ಅಧಿಕೃತ ವ್ಯಾಪಾರಿಯಿಂದ ಖರೀದಿ ಮಾಡಬಹುದಾಗಿದೆ.

ಭಾರತದ ನಿವಾಸಿಗಳ ವಿದೇಶೀ ವಿನಿಮಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳನ್ನು ರಿಸರ್ವ್ ಬ್ಯಾಂಕು ಪರಿಷ್ಕರಿಸುತ್ತಲೇ ಬಂದಿದೆ ಮತ್ತು ಇತ್ತೀಚಿನ ದಿನಗಳಲ್ಲಿ ಜಾರಿಯಲ್ಲಿರುವ ಕಾರ್ಯವಿಧಾನವನ್ನು ಸರಳಗೊಳಿಸಲು ಮತ್ತು ಉದಾರಗೊಳಿಸಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಈ ದಿಕ್ಕಿನಲ್ಲಿ ಇನ್ನೊಂದು ಹೆಜ್ಜೆ ಮುಂದುವರಿದು, ವೈದ್ಯಕೀಯ ವೆಚ್ಚಕ್ಕೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವ ಕಾರ್ಯವಿಧಾನವನ್ನು ಸಹ ಸರಳಗೊಳಿಸಲಾಗುತ್ತಿದೆ.

ಪರಿಷ್ಕೃತ ಕಾರ್ಯವಿಧಾನದ ಬಗೆಗಿನ ವಿವರವಾದ ಮಾರ್ಗದರ್ಶೀ ಸೂತ್ರಗಳನ್ನು ಅಧಿಕೃತ ವ್ಯಾಪಾರಿಗಳಿಗೆ ನೀಡಲಾಗುತ್ತಿದೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/264